ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಇದಕ್ಕೆ ದೀರ್ಘಸಮಯ ತೆಗೆದುಕೊಂಡರೆ ಮುಂದಿನ ಐದಾರು ತಿಂಗಳುಗಳಲ್ಲಿ ಸಾಕಷ್ಟು ಸುಧಾರಣೆಗಳು ತನ್ನಿಂದ ತಾನೆ ಆಗಬಹುದು. ತ್ವರಿತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ತಮಗೆ ಏನು ತೊಂದರೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವುಗಳು ಭಾವಿಸಿದ ಹಾಗೆ ಒಂದು ತೀರ್ಮಾನಕ್ಕೆ ಬರಲು 5-6 ತಿಂಗಳುಗಳು ಬೇಕಾಗಿಲ್ಲ. ತಮಗೆ ಮಾತ್ರ ಹತಾಶ ಮನೋಭಾವದ ಕಾರ್ಮೋಡ ಸುತ್ತುವರಿದಂತೆ ಕಾಣುತ್ತದೆ. ನಾವು 15 ದಿವಸಗಳ ಒಳಗಡೆ ಈ ಸಭೆಯನ್ನು ಕರೆಯುತ್ತೇವೆ. ಅದರ ನಂತರ ಬೇಕಾದರೂ ಸಭೆ ಸೇರೋಣ. ಆಗ ತಾವು ಹೇಳಿದಂತೆ ಮಾಡೋಣ. ಆಯಿತಲ್ಲ ಮತ್ತೆ ತಾವು ಹೇಳಿದ ಕೆಲಸಗಳನ್ನು ಅದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ. ಮೆಟೀರಿಯಲ್ಸ್‌ಗಾಗಿ ಈಗಾಗಲೇ ಆರ್ಡರ್ ಮಾಡಿದ್ದೇವೆ. ಇನ್ನು ಬಂಗಾರುಪೇಟೆ ವಿಚಾರದಲ್ಲಿ ತಾವುಗಳು ಕೇಳಿದ್ದೀರಿ. ಅಲ್ಲಿಯ ಸಬ್‌ಸ್ಟೇಷನ್ ಮೂರು ತಿಂಗಳುಗಳೊಳಗಾಗಿ ಕಮಿಶನ್ ಆಗುತ್ತದೆ. ಈ ಎಲ್ಲಾ ವಿಶ್ಲೇಷಣೆಗಳ ಬಗ್ಗೆ ಚರ್ಚೆಗಳ ಬಗ್ಗೆ ಗಮನ ಹರಿಸಿದ್ದೇವೆ. ನಾವು 60 ಸಾವಿರ ಪಂಪ್‌ಸೆಟ್‌ಗಳಿಗೆ ಆದ್ಯತೆಯ ಮೇಲೆ ವಿದ್ಯುಚ್ಛಕ್ತಿ ಕೊಡಬೇಕೆಂಬ ವಿಚಾರದಲ್ಲಿ, ನಾವೇನು ನಿರ್ಣಯ ಮಾಡಿದ್ದೇವೆ ಅಂದರೆ ಎರಡು ಕಂಬಗಳಿರುವಕಡೆ ನಿಯಮಗಳನ್ನು ಸಡಿಲಿಸಿ, ಆದ್ಯತೆಯನ್ನುಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಹಾಗೆಯೇ ಎಸ್/ಸಿ ಎಸ್‌ಟಿಯವರಿಗೆ ನೂರು ಬಾವಿ ಯೋಜನೆಯಲ್ಲಿ ಕೂಡ ಅವರಿಗೆ ಪ್ರಮುಖ ಆದ್ಯತೆಯನ್ನು ಕೊಟ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳ ಬೇಕೆಂದು ಈಗಾಗಲೇ ನಾವು ಕೆಇಬಿ ಯವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಈ ಎಲ್ಲಾ ಸಮಸ್ಯೆಗಳನ್ನು 15 ದಿವಸಗಳೊಳಗಾಗಿ ಸಭೆ ಕರೆದು ಸಮಾಲೋಚನೆ ಮಾಡಿ, ನಂತರ ಇದರ ವಿಶ್ಲೇಷಣೆ ಮಾಡಲು ಸರ್ಕಾರ ಸಿದ್ಧವಿದೆ ಎಂದು ಹೇಳುತ್ತೇನೆ.

(ಪ್ರಕಟಣೆ)

ಅಧ್ಯಕ್ಷರು : ಮಾನ್ಯ ಸದಸ್ಯರುಗಳಾದ ಡಾ: ಎನ್.ಬಿ.ನಂಜಪ್ಪನವರು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಮತ್ತು ಶ್ರೀ ಜಿ.ಎಸ್. ಆಚಾರ್‌ರವರು ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಾಲಿನ ದರ ಹೆಚ್ಚು ಮಾಡುವ ಬಗ್ಗೆ ಪ್ರಸ್ತಾವ ಮತ್ತು ಮಂತ್ರಿಯವರಿಂದ ಹೇಳಿಕೆ

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಶುಸಂಗೋಪನ ಮಂತ್ರಿಗಳು ಹಾಲಿನ ದರವನ್ನು 15 ದಿವಸಗಳಲ್ಲಿ ಹೆಚ್ಚಿಸುತ್ತೇವೆ ಎಂದು ಹೇಳಿದ್ದರು. ಆದರೆ ಅವರು ಆ ಕೆಲಸವನ್ನು ಮಾಡಲಿಲ್ಲ. ಆ ಬಗ್ಗೆ ನಾನು ಅವರ ಮೇಲೆ ಒಂದು ಹಕ್ಕುಚ್ಯುತಿ ಸೂಚನೆಯನ್ನು ಕೂಡ ತಂದಿದ್ದೆ. ಆದರೆ ತಾವು ಅದಕ್ಕೆ ಅವಕಾಶ ಇಲ್ಲ, ಅದು ಭರವಸೆ ಸಮಿತಿಗೆ ಹೋಗಬೇಕಾಗುತ್ತದೆಂದು ಹೇಳಿದ್ದೀರಿ. ಈಗಲಾದರೂ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂದು ನಾನು ತಮ್ಮ ಮೂಲಕ ಕೇಳ ಬಯಸುತ್ತೇನೆ.

+ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನಾ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ನಾನುಈ ಸದನದಲ್ಲಿ 15 ದಿವಸಗಳೊಳಗಾಗಿ ಈ

ಹಾಲಿನ ದರವನ್ನು ಪರಿಷ್ಕರಣೆ ಮಾಡುತ್ತೇನೆ ಎಂದು ಹೇಳಿದ್ದೆ. ಆ ರೀತಿ ಹೇಳಿದ ಮೇಲೆ ಬಹಳ ಸಮಯವನ್ನು ಆ ಕುರಿತು ತೆಗೆದುಕೊಳ್ಳುವಂತಾಯಿತು. ಅಂದರೆ 15 ದಿವಸಗಳೊಳಗಾಗಿ ಆ ಕೆಲಸವನ್ನು ಮಾಡಲು ಆಗಲಿಲ್ಲ. ಅಂದರೆ ನಾನು ಕಾರ್ಯೋನ್ಮುಖನಾಗಲಿಲ್ಲವೆಂದು ತಿಳಿಯಬಾರದು ಆ ಬಗ್ಗೆ ಹಲವಾರು ಬಾರಿ ಅಧಿಕಾರಿಗಳನ್ನು ಮತ್ತು ಯೂನಿಯನ್‌ನ ಮುಖಂಡರುಗಳನ್ನು ಕರೆದು ಚರ್ಚೆ ಮಾಡಲು ಮತ್ತು ನಿರ್ಣಯಕ್ಕೆ ಬರಲು ಬಹಳ ಕಷ್ಟ ಆಯಿತು. ಆ ಕುರಿತು ಈ ಹೇಳಿಕೆಯನ್ನು ನಾನು ಸದನಕ್ಕೆ ಕೊಡ ಬಯಸುತ್ತೇನೆ.

ಹಾಲಿನ ಶೇಖರಣೆ ಮತ್ತು ಮಾರಾಟ ಬೆಲೆಯನ್ನು ಕೊನೆಯದಾಗಿ ಅಂದರೆ 1-2-1989ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿತ್ತು. ಧಾರವಾಡ, ಬೆಳಗಾಂ ಮತ್ತು ಗುಲ್ಬರ್ಗಾ ಮಿಲ್ಕ್ ಶೆಡ್‌ಗಳಲ್ಲಿ ಶೇಖರಣೆ ಮತ್ತು ಮಾರಾಟ ಬೆಲೆಯನ್ನು ಮತ್ತು 1-5-1990ರಿಂದ ಹಾಗೂ ಬಿಜಾಪುರ ಮಿಲ್ಕ್ ಶೆಡ್‌ನಲ್ಲಿ 11-8-1989ರಿಂದ ಜಾರಿಗೆ ಬರುವಂತೆ 50 ಪೈಸೆಯನ್ನು ಹೆಚ್ಚಿಸಲಾಗಿರುತ್ತದೆ.

2. ಕಳೆದ ಸ್ವಲ್ಪ ತಿಂಗಳುಗಳಲ್ಲಿ ಒಳ ಮೇವು ಮತ್ತು ಹಸಿರು ಮೇವಿನ ವೆಚ್ಚದಲ್ಲಿ ಒಂದೇ ರೀತಿಯಾಗಿ ದರಗಳ ಏರಿಕೆಯಾಗಿದೆ. ಹಾಲೂ ಉತ್ಪಾದನೆಯ ವೆಚ್ಚವು ಲೀಟರ್ ಒಂದಕ್ಕೆ 32 ಪೈಸೆಯನ್ನು ಹೆಚ್ಚಿದೆ ಎಂದು ಅಂದಾಜು ಮಾಡಲಾಗಿದೆ.

3. ಹಾಲಿನ ಶೇಖರಣಾ ವೆಚ್ಚಸಂಸ್ಕರಣಾ ವೆಚ್ಚ ಮತ್ತು ವಿತರಣಾ ವೆಚ್ಚವು ಸಹ ಸತತವಾಗಿ ಏರುತ್ತಿವೆ. ಇದರಿಂದಾಗಿ, ಈ ವರ್ಷ ಕೆಲವು ಡೈರಿಗಳು ನಷ್ಟ ಅನುಭವಿಸುತ್ತಿವೆ. ಇದಲ್ಲದೇ, ಕಳೆದ ಕೆಲವು ತಿಂಗಳುಗಳಲ್ಲಿ ಡೀಸಲ್ ವೆಚ್ಚದಲ್ಲಿ ಸಹ ಏರಿಕೆಯಾಗಿದ್ದು ಇದರಿಂದಾಗಿ ಲೀಟರ್ ಒಂದಕ್ಕೆ 80 ಪೈಸೆಯ ಅಧಿಕ ಹೊರೆ ಉಂಟಾಗಿದೆ. ವೇತನ ವೆಚ್ಚದಲ್ಲಿ ಏರಿಕೆ, ಪೌಜ್ ಫಿಲಂನ ವೆಚ್ಚದಲ್ಲಿನ ಏರಿಕೆ ಇತ್ಯಾದಿಗಳಿಂದ ಸಹ ಸುಮಾರು 6 ಪೈಸೆಯಷ್ಟು ಹೊರೆ ಉಂಟಾಗಿದೆ.

4. ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಉತ್ತರ ಕರ್ನಾಟಕದಲ್ಲಿರುವ, ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಗುಲ್ಬರ್ಗಾ ಪ್ರದೇಶಗಳಲ್ಲಿ ಪ್ರತಿ ಲೀಟರ್‌ಗೆ 32 ಪೈಸೆಯನ್ನು ಶೇಖರಣೆ ಮಾಡುವಾಗ, ಹಾಗೂ ಪ್ರತಿ ಲೀಟರ್‌ಗೆ 50 ಪೈಸೆಗಳಂತೆ ಮಾರಾಟ ಮಾಡುವಾಗ ಹೆಚ್ಚಿಸಲಾಗುವುದು. ಈ ಹಾಲಿನ ಜಿಡ್ಡಿನ ಅಂಶವು ಶೇಕಡಾ ನಾಲ್ಕೂವರೆ ಇರುತ್ತದೆ. ಉಳಿದ ಹಾಲಿನ ಶೆಡ್ಡುಗಳಲ್ಲಿ ಶೇಖರಣೆಯ ದರವು 39 ಪೈಸೆಯಂತೆ ಮಾರಾಟದ ಬೆಲೆಯು ಪ್ರತಿ ಲೀಟರ್‌ಗೆ 50 ಪೈಸೆ ದರದಲ್ಲಿಯೂ ಹೆಚ್ಚಿಸಲಾಗುವುದು. ಈ ಹಾಲಿನ ಜಿಡ್ಡಿನ ಅಂಶವು ಶೇಕಡಾ ಮೂರುವರೆಯಷ್ಟು ಇದ್ದು, ದಕ್ಷಿಣ ಕನ್ನಡ, ಹಾಸನ ಮತ್ತು ಮೈಸೂರು ಹಾಲಿನ ಶೆಡ್ ಇವುಗಳ ಮಿತಿಯಲ್ಲಿ ಬರುತ್ತವೆ. ಜಿಡ್ಡಿನ ಅಂಶವು ಇತರೇ ಸ್ಥಳಗಳಲ್ಲಿ ಬೆಂಗಳೂರು ಸೇರಿ ಶೇಕಡಾ 4 ಭಾಗ ಇರುತ್ತದೆ.

5. ಬಲ್ಕ್‌ವೆಂಡಿಂಗ್ ಬೂತುಗಳ ಮೂಲಕ ಮಾರಾಟ ಮಾಡುವ ಹಾಲಿನ ದರವು ಪ್ರತಿ ಲೀಟರ್‌ಗೆ 5 ರೂ. ನಂತೆ ಇದ್ದು, ಇದರ ಜಿಡ್ಡಿನ ಅಂಶವು ಶೇಕಡಾ 3 ರಂತೆ ಮುಂದುವರಿಯುತ್ತದೆ.

6. ಪ್ರತಿ ವರ್ಷ ಸಮೃದ್ಧಿ ಕಾಲದಲ್ಲಿ ಶೇಖರಣಾ ಬೆಲೆಯನ್ನು ಕಡಿಮೆ ಮಾಡುವುದು ಪದ್ಧತಿಯಾಗಿದೆ. ಆದಾಗ್ಯೂ ತಾಂತ್ರಿಕ ಸೌಲಭ್ಯದ ವೆಚ್ಚದಲ್ಲಿನ

ಬೆಲೆ ಏರಿಕೆಯನ್ನು ಗಮನದಲ್ಲಿರಿಸಿಕೊಂಡು ಈ ವರ್ಷ ಸಮೃದ್ಧಿ ಕಾಲದಲ್ಲಿ ಶೇಖರಣಾ ಬೆಲೆಯನ್ನು ಕಡಿಮೆ ಮಾಡಿರುವುದಿಲ್ಲ.

7. ಆದ್ದರಿಂದ ಈ ಪರಿಷ್ಕೃತ ಬೆಲೆಯು 1ನೇ ಫೆಬ್ರವರಿ 1991ರಿಂದ ಜಾರಿಗೆ ತರಲೂ ನಿರ್ಧಾರ ಕೈಗೊಳ್ಳಲಾಗಿದೆ. ಆದಾಗ್ಯೂ ಈ ಬೆಲೆಯು ಬರಡು ಕಾಲದಲ್ಲಿ ಚಾಲ್ತಿಯಲ್ಲಿರುತ್ತದೆ. ಮತ್ತು ಸಮೃದ್ಧಿ ಕಾಲದಲ್ಲಿ ವಾಡಿಕೆಯಂತೆ ಹಾಲು ಸಂಗ್ರಹಣಾ ಬೆಲೆಯಲ್ಲಿ ಮಾತ್ರ ಇಳಿಸಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಸಭೆಯನ್ನು ಕರೆದ ಮುಖ್ಯ ಉದ್ದೇಶ ಅಂದರೆ, ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಬಗ್ಗೆ ತಂದ ತಿದ್ದುಪಡಿಯನ್ನು ಚರ್ಚೆ ಮಾಡಿ ತೀರ್ಮಾನಕ್ಕೆ ಬರಬೇಕೆಂದು ಆಗಿದೆ. ಇದರ ಬಗ್ಗೆ ಇನ್ನೂ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಆದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಬಿಎಸಿ ಕರೆದು ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ ಎಂದು ನಾನು ಅಂದುಕೊಂಡಿದ್ದೆ. ಈ ಸಭೆಯನ್ನು ನಾವು ಇಲ್ಲಿಗೆ ಮುಗಿಸಿದರೆ ನಾವು ಸೇರಿದಂಥ ಉದ್ದೇಶವು ಸಫಲವಾಗುವುದಿಲ್ಲ. ಆದುದರಿಂದ ದಯಮಾಡಿ ನಾಳೆಗೆ ಕೂಡ ಈ ಸದನವನ್ನು ಮುಂದಕ್ಕೆ ಹಾಕಿ ಇನ್ನೂ ಚರ್ಚೆ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಈ ತಿದ್ದುಪಡಿ ಮಸೂದೆ ಬಗ್ಗೆ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು : ಎಳ್ಳು ಅಮಾವಾಸ್ಯೆಯ ದಿವಸ ಪ್ರಾರಂಭ ಮಾಡಿದ್ದೀರಿ ಎಂದು ತಾವುಗಳು ಮೊದಲೇ ಹೇಳಿದ್ದೀರಿ. ಆದ್ದರಿಂದ ನಾವು ಇದನ್ನು ಹೊಸ ವರ್ಷದಲ್ಲಿ ಏತಕ್ಕೆ ಪ್ರಾರಂಭ ಮಾಡಬಾರದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಎಳ್ಳು ಅಮಾವಾಸ್ಯೆಯ ದಿವಸ ನಾವು ಪ್ರಾರಂಭ ಮಾಡಿದ್ದು, ತಪ್ಪಾಗಿದೆ, ಇನ್ನು ಮುಂದೆ ಇಂತಹ ತಪ್ಪುಗಳು ಆಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಒಪ್ಪಿಕೊಂಡರೆ, ಇದಕ್ಕೆ ಸರ್ಕಾರ ಸಿದ್ದವಾಗಿದ್ದರೆ, ತಮ್ಮ ಸಲಹೆ ಒಪ್ಪಿಕೊಳ್ಳಲು ನಾವು ಸಿದ್ಧರಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಪಶುಸಂಗೋಪನ ಮಂತ್ರಿಯವರು ಹೇಳಿದ್ದನ್ನು ಕೇಳಿದ್ದೇವೆ. ಹಾಗಾದರೆ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಏನಾದರು? ಎಂದು ತಿಳಿಸುತ್ತೀರಾ?

ಅಧ್ಯಕ್ಷರು : ಒಂದು ಪ್ರಮಿರವಾಗಿದೆ; ಇನ್ನೊಂದು ಗ್ರಹಣ ಆಷ್ಟೆ..

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಒಂದು ಚರ್ಚೆ ಮುಂದುವರಿಯುವುದಕ್ಕೆ ತಾವು ಅವಕಾಶವನ್ನು ಕೊಡಿ. ಉತ್ತರ ಕೊಡುವುದು ಮತ್ತು ಇದನ್ನು ತಾವು ಮತಕ್ಕೆ ಹಾಕತಕ್ಕಂಥದ್ದು ಹೊಸ ವರ್ಷದಲ್ಲಿಯೇ ಮಾಡೋಣ. ಇನ್ನುಮೂರು ನಾಲ್ಕು ದಿವಸ ಇದರ ಚರ್ಚೆಗೆ ಒಂದು ಅವಕಾಶವನ್ನು ಕೊಡಿ. ನಾವೆಲ್ಲರೂ ಮಾತನಾಡಬೇಕಾಗಿದೆ.

ಅಧ್ಯಕ್ಷರು : ನಿಮಗೆ ನಾನು ಅವಕಾಶವನ್ನು ಕೊಡುತ್ತೇನೆ.

ಶ್ರೀ ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಬಿಸಿನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನದಂತೆ ಈ ಸಭೆಯ ಕಾರ್ಯಕಲಾಪ ನಡೆಯಬೇಕು. ಅವರೂ ಮಾತನಾಡಬೇಕು.

ನಾಗರಾಜ್‌ರವರೂ ಮಾತನಾಡಬೇಕು, ಬಹಳ ಜನ ಮಾತನಾಡುವವರಿದ್ದಾರೆ. ಅವರಿಗೆಲ್ಲಾ ಅವಕಾಶವನ್ನು ಕೊಡಬೇಕಾಗಿದೆ. ತಾವು ಹೇಳಿದ ಹಾಗೆ ಹೊಸ ವರ್ಷದಲ್ಲಿ ಪ್ರಾರಂಭ ಮಾಡಿದರೆ ಬಹಳ ಸರಿಯಾಗಿರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ಗೆ ಬಂದಿರಲಿಲ್ಲ. ಬಿ.ಎ.ಸಿ. ಯಲ್ಲಿ ಏನು ತೀರ್ಮಾನವಾಯಿತು. 26-27ನೇ ತಾರೀಖು ನಾವು ಇದನ್ನು ಚರ್ಚೆ ಮಾಡಿ ಇದನ್ನು ಪಾಸು ಮಾಡಿಕೊಡಬೇಕು ಎಂದು ಕೇಳಿದ್ದೀರಿ. ಅದಕ್ಕೆ ನಾವು ಸಹಿತ ಒಪ್ಪಿಕೊಂಡಿದ್ದೇವೆ. ಬೆಳಿಗ್ಗೆ ಏನು ಹೇಳಿದ್ದೀರಿ, ಅದನ್ನು ರಿಪೀಟ್ ಮಾಡಿ ಸಾಕು.

ಶ್ರೀ ಬಿ. ಬಸವಲಿಂಗಪ್ಪ : ಹೇಳಿಬಿಟ್ಟಿದ್ದೇನೆ. ಆಗಿಂದಾಗ್ಗೆ ಪುನರಾವೃತ್ತಿ ಮಾಡುವುದು ಸರಿಯಲ್ಲ. ಬೆಳಿಗ್ಗೆ ಹೇಳಿದ್ದೇ ಸತ್ಯ. ಪುನಃ ಹೊಸ ವರ್ಷದಲ್ಲಿ ಪಾಸು ಮಾಡುವುದೂ ಸತ್ಯ. ಅದನ್ನೂ ಮಾಡುತ್ತೇವೆ. ಅದೂ ಸತ್ಯ. ಆದ್ದರಿಂದ...

ಶ್ರೀ ಡಿ.ಬಿ. ಚಂದ್ರೇಗೌಡ : ಹಳೆಯ ವರ್ಷದ ಹಠವನ್ನು ಬಿಟ್ಟರು. ಈಗ ಹೊಸ ವರ್ಷಕ್ಕೆ ಹೋದ ಮೇಲೆ ಏನಾಗುತ್ತದೆ ಎಂದು ನೋಡೋಣ. ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪ್ರಾರಂಭದಲ್ಲಿ ಏನು ಹೇಳಿದ್ದೇನೆ ಎಂದರೆ ಅನೇಕ ಜನರ ಸಮಸ್ಯೆಗಳನ್ನು ಬೇರೆ ಕಡೆಗೆ ತಿರುಗಿಸುವುದಕ್ಕೋಸ್ಕರ ಮಾಡಿದಂಥ ವ್ಯವಸ್ಥಿತವಾದಂಥ ಷಡ್‌ಯಂತ್ರ ಇದು. ಪ್ರಾಮಾಣಿಕವಾಗಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ತಿದ್ದುಪಡಿಯನ್ನು ತಂದು ಜನಹಿತ ಮಾಡಬೇಕು ಎಂದೇನೂ ಇಲ್ಲ. ಅನೇಕ ಸಮಸ್ಯೆಗಳು ಕಳೆದ ಒಂದು ವರ್ಷದಿಂದಲೂ ಇದೆ. ಜನರ ಗಮನವನ್ನು ಬೇರೆಡೆಗೆ ಸೆಳೆಯುವುದಕ್ಕೋಸ್ಕರ ಇವತ್ತು ಈ ಚರ್ಚೆಯನ್ನು ಪ್ರಾರಂಭ ಮಾಡುವಂಥ ಪ್ರಯತ್ನವನ್ನು ಸನ್ಮಾನ್ಯ ಸಚಿವರು ಮಾಡಿದರು. ಅದಕ್ಕೋಸ್ಕರವಾಗಿ ನಾನು ಹೇಳುವಂಥದ್ದು ಈಗ ಹೊಸ ವರ್ಷಕ್ಕೆ ಎಂದು ಅಷ್ಟರ ಒಂದು ತೀರ್ಮಾನ ಏನು ಇದೆ. ಆ ಬಗ್ಗೆ ಇನ್ನೂ ಬೇರೆ ಬೇರೆ ಕಡೆಯಿಂದ ಅವರಿಗೆ ಆದೇಶ ಬರಬೇಕಾಗಿದೆ, ಅದಕ್ಕೆ ಅವರು ಕಾಯಲಿ. ಆದರೆ ಚರ್ಚೆಗೆ ಮಾತ್ರ ದಯವಿಟ್ಟು ತಾವು ನಾಳೆ ನಮಗೆ ಅವಕಾಶ ಮಾಡಿಕೊಟ್ಟರೆ ನಮ್ಮ ಅಭಿಪ್ರಾಯಗಳನ್ನೂ ಹೇಳುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ನಾವು ನಮ್ಮ ಕ್ಷೇತ್ರಗಳಿಗೆ ಹೋಗಿ ಮುಖ ತೋರಿಸುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಬಸವಲಿಂಗಪ್ಪನವರು ಹೊಸ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಬಹಳ ಸಂತೋಷ ಎಂದು ಇಟ್ಟುಕೊಳ್ಳೋಣ. ಆಗ ಈ ಇಲಾಖೆಯೇ ತಮಗೆ ಉಳಿದಿರುತ್ತದೆಯೇ ಎನ್ನುವ ನಂಬಿಕೆ ನಮಗೆ ಹೋಗುತ್ತಿದೆ. ಆದುದರಿಂದ ಈ ಇಲಾಖೆಯೇ ಬದಲಾವಣೆ ಆಗಿಬಿಟ್ಟರೆ ತಾವು ಏನೋ ತರಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ, ಕಳಕಳಿ ಇದೆ. ಆದ್ದರಿಂದ ಇದರ ಬಗ್ಗೆ ಚರ್ಚೆಯಾಗಲಿ, ಬೇಕಾದರೆ ರಾತ್ರಿಯವರೆಗೂ ಕುಳಿತುಕೊಳ್ಳೋಣ.

ಅಧ್ಯಕ್ಷರು : ನಿಮಗೆ ನಾನು ಆ ತೊಂದರೆ ಕೊಡುವುದಿಲ್ಲ. ಬೇರೆ ಬೇರೆ ಕೆಲಸಗಳು ಎಲ್ಲರಿಗೂ ಇರುತ್ತವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗಣಪತಿಯನ್ನು ಮಾಡು ಎಂದು ಹೇಳಿದರೆ ಆವರ ಆಪ್ಪನನ್ನೇ ಮಾಡುತ್ತೇನೆ ಎಂದು ಹೇಳಿ ಈ ರೀತಿ ಬೇರೆ ಏನೋ ತಿದ್ದುಪಡಿಯನ್ನು ತಂದರೆ ನಾವು ಏನೂ ಮಾಡೋಣ. ಇಲ್ಲಿ ಚರ್ಚೆಯಾದಾಗ ಗಣಪತಿಯನ್ನು ಮಾಡುತ್ತಾರೆ ಎಂದು ಯೋಚನೆಯನ್ನು ಮಾಡಿದ್ದೆವು. ಆದರೆ ಇವರು ಗಣಪತಿಯ ಸ್ವರೂಪವನ್ನೇ ವ್ಯತಿರಿಕ್ತ ಮಾಡಿ ಈ ರೀತಿ ಈ ಸ್ಥಿತಿಗೆ ತರುವ ಪ್ರಯತ್ನವನ್ನು ಮಾಡಿದರೆ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ : ಯಡಿಯೂರಪ್ಪನವರಿಗೆ ಮಾತನಾಡಲಿಕ್ಕೆ ಪ್ರಾರಂಭ ಕೊನೆ, ಮೊದಲು ಯಾವುದೂ ಇಲ್ಲವೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೂ ಇಲ್ಲ. ಆ ರೀತಿ ನಮ್ಮ ಸ್ಥಿತಿಯನ್ನು ಮಾಡಿಟ್ಟಿದ್ದೀರಿ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗುವಾಗ ತಾವು ಇರಲಿಲ್ಲ. ಮಾನ್ಯ ಸಿಂಧ್ಯಾರವರು ಹೇಳುವಂತೆ ತಾವು ಇರಲಿಲ್ಲ. ಮಾನ್ಯ ಅಧ್ಯಕ್ಷರು ನಮ್ಮ ನೆರವಿಗೆ ಬರಬೇಕು. ನಾವು ಬಿಲ್ಲನ್ನು ಪಾಸು ಮಾಡಿಕೊಡುವುದಕ್ಕೆ ಸಿದ್ಧರಿದ್ದೇವೆ. ನಾವೇನು ನಮ್ಮ ಭರವಸೆಯಿಂದ ವಾಪಸ್ ಹೋಗಿಲ್ಲ. ಏನೇನೋ ಮಾತನಾಡುವುದಕ್ಕೆ ಅವಕಾಶವನ್ನು ನೀವು ನಮಗೆ ಮಾಡಿಕೊಡುತ್ತಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ : ಏನೇನೋ ಮಾಡುವುದಕ್ಕೆ ನಾನು ಹೊರಟಿಲ್ಲ. ನನ್ನ ಪಾರ್ಟಿಯ ಆದೇಶದ ಮೇಲೆ ನಾನು ಮಾಡಲಿಕ್ಕೆ ಹೊರಟಿದ್ದೇನೆ. ನಾವು ಇದನ್ನು ಮಾಡಿಯೇ ಮಾಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಏನು ಹೇಳಿದರೂ ಅದಕ್ಕೆ ಅರ್ಥ ಇಲ್ಲ. ನಾವು ಮಾಡುವಂಥ ಕೆಲಸವನ್ನು ಮಾಡಿಯೇ ಮಾಡುತ್ತೇವೆ. ನೀವು ಅನುಮಾನ ಪಡಬೇಡಿ.ದಯಮಾಡಿ ಇವತ್ತು ನೀವು ಮನೆಗಳಿಗೆ ಹೋಗಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಹೇಳಿದ್ದರು, ಕಾಮ, ಫುಲ್‌ಸ್ಟಾಪ್ ಯಾವುದೇ ಇಲ್ಲದೇ ಒಂದು ವಿಧೇಯಕವನ್ನು ಮಂಡಿಸುತ್ತೇವೆ, ಅದನ್ನು ಪಾಸು ಮಾಡಬೇಕು ಎಂದು ಮೊದಲು ಇದ್ದದ್ದು. ಇವತ್ತು ಕಾಮ ಬದಲಾವಣೆ ಆಯಿತು, ಫುಲ್‌ಸ್ಟಾಪ್ ಬದಲಾವಣೆ ಆಯಿತು, ಅಕ್ಷರಗಳು ಬದಲಾವಣೆ ಆಯಿತು, ಪುಟಗಳು ಬದಲಾವಣೆ ಆಯಿತು, ಕೊನೆಗೆ ಅವರ ಇಲಾಖೆ ಕೂಡಾ ಬದಲಾವಣೆ ಆಗುವು ಪರಿಸ್ಥಿತಿಗೆ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ : ನನ್ನ ಇಲಾಖೆ ಬದಲಾವಣೆ ಆಯಿತು ಎಂದು ಇಟ್ಟುಕೊಳ್ಳೋಣ. ನಮ್ಮ ಸದಸ್ಯರುಗಳು ಇದ್ದಾರೆ, ಬೇರೆಯವರು ಬಂದು ಇದನ್ನು ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಮುಕ್ತಾಯ ಹಂತ ತಲುಪಿರುವ ಚಳಿಗಾಲದ ಅಧಿವೇಶನ ಸಾಂಗವಾಗಿ ಕಾರ್ಯಕಲಾಪಗಳನ್ನು ನಡೆಸುವುದರಲ್ಲಿ ಸಹಕರಿಸಿದ ಸಭಾನಾಯಕರಿಗೂ, ವಿರೋಧ ಪಕ್ಷದ ನಾಯಕರಿಗೂ ಬೇರೆ ವಿರೋಧಪಕ್ಷದ ನಾಯಕರುಗಳಿಗೂ,

ಮಾನ್ಯ ಮಂತ್ರಿಗಳಿಗೂ ಹಾಗೂ ಮಾನ್ಯ ಸದಸ್ಯರಿಗೂ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೂ ನಾನು ಆಭಾರಿಯಾಗಿದ್ದೇನೆ.

ಹೊಸ ವರ್ಷ ತಮಗೆಲ್ಲರಿಗೂ ರಾಜ್ಯಕ್ಕೆ, ರಾಷ್ಟ್ರಕ್ಕೆ ಸುಖ ಸಂತೋಷ ಹಾಗೂ ಸಮೃದ್ಧಿಯನ್ನು ತರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾವುಗಳೂ ತಮಗೆ ಅಭಿನಂದಿಸುತ್ತೇವೆ;

ಅಧ್ಯಕ್ಷರು : ಈ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದೇನೆ.

(ಸದನವು 6-02ಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).